# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | | **325 (460)** |
| **ಸದಸ್ಯರ ಹೆಸರು** | | **ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | | **10-07-2023** |
| **ಉತ್ತರಿಸಬೇಕಾದ ಸಚಿವರು** | | **ಉನ್ನತ ಶಿಕ್ಷಣ ಸಚಿವರು** |
| **ಪ್ರಶ್ನೆ** | | **ಉತ್ತರ** |
| ಅ) | ಬೀದರ್ ಜಿಲ್ಲೆಯಲ್ಲಿ ಎಷ್ಟು ಪದವಿ ಕಾಲೇಜುಗಳಿವೆ? ಅವುಗಳ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಖಾಲಿಯಿರುವ ಹುದ್ದೆಗಳೆಷ್ಟು; (ವಿವರ ನೀಡುವುದು) | ಬೀದರ್ ಜಿಲ್ಲೆಯಲ್ಲಿ ಒಟ್ಟು 10 ಸರ್ಕಾರಿ ಪದವಿ ಕಾಲೇಜುಗಳಿರುತ್ತವೆ. ಸದರಿ ಕಾಲೇಜುಗಳಲ್ಲಿ 197 ಬೋಧಕ ಹುದ್ದೆಗಳು ಹಾಗೂ 91 ಬೋಧಕೇತರ ಹುದ್ದೆಗಳು ಮಂಜೂರಾಗಿರುತ್ತವೆ. ಈ ಪೈಕಿ 133 ಬೋಧಕರು ಹಾಗೂ 32 ಬೋಧಕೇತರ ಸಿಬ್ಬಂದಿ ವರ್ಗದವರು ಕರ್ತವ್ಯ ನಿರ್ವಹಿಸುತ್ತಿದ್ದು, 64 ಬೋಧಕ ಹುದ್ದೆಗಳು ಹಾಗೂ 59 ಬೋಧಕೇತರ ಹುದ್ದೆಗಳು ಖಾಲಿ ಇರುತ್ತವೆ. ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ. |
| ಆ) | ಹೆಚ್ಚಿನ ಸಂಖ್ಯೆಯಲ್ಲಿ ಕಾಲೇಜುಗಳಿದ್ದರೂ ಅವುಗಳಿಗೆ ಸಮರ್ಪಕವಾದ ಕಟ್ಟಡಗಳಿವೆಯೇ; (ವಿವರ ನೀಡುವುದು) | 10 ಸರ್ಕಾರಿ ಪದವಿ ಕಾಲೇಜುಗಳ ಪೈಕಿ 09 ಕಾಲೇಜುಗಳು ಈಗಾಗಲೇ ಸ್ವಂತ ಕಟ್ಟಡ ಹೊಂದಿರುತ್ತವೆ. ಈ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ರೂ.1589.66 ಲಕ್ಷಗಳ ಅನುದಾನ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸದರಿ ಪ್ರಸ್ತಾವನೆಗೆ ಅನುಗುಣವಾಗಿ ಮಂಡಳಿ ವತಿಯಿಂದ ರೂ.2579.00 ಲಕ್ಷಗಳ ಅನುದಾನ 2022-23ನೇ ಸಾಲಿನ ಮ್ಯಾಕ್ರೋ (ಮೆಗಾ) ಯೋಜನೆಯಲ್ಲಿ ಮಂಜೂರು ಮಾಡಿ ಸಮರ್ಪಕ ಕಟ್ಟಡ ಹೊಂದಲು ಸಹಕರಿಸಲಾಗಿರುತ್ತದೆ. ಬೀದರ್ ಜಿಲ್ಲೆಯಲ್ಲಿನ ಸರ್ಕಾರಿ ಮಹಿಳಾ ಕಾಲೇಜು, ಬೀದರ್ ಇಲ್ಲಿಗೆ ಇತ್ತೀಚೆಗೆ ನಿವೇಶನ ಮಂಜೂರಾಗಿದ್ದು, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ವತಿಯಿಂದ ಸ್ವಂತ ಕಟ್ಟಡ ನಿರ್ಮಿಸಲು ಅನುದಾನ ಮಂಜೂರಾಗಿರುತ್ತದೆ. |
| ಇ) | ಕಟ್ಟಡಗಳಿದ್ದಲ್ಲಿ, ಅವುಗಳ ಸ್ವಚ್ಛತೆಗಾಗಿ 'ಡಿ' ವೃಂದದ ಸಿಬ್ಬಂದಿಗಳಿದ್ದಾರೆಯೇ; 'ಡಿ' ವೃಂದದ ಸಿಬ್ಬಂದಿ ಇಲ್ಲದಿದ್ದಲ್ಲಿ, ನೇಮಕ ಮಾಡಿಕೊಳ್ಳುವ ಯೋಜನೆ ಸರ್ಕಾರದ ಮುಂದಿದೆಯೇ? | ಬೀದರ್ ಜಿಲ್ಲೆಯಲ್ಲಿನ 10 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 45 'ಡಿ' ವೃಂದದ ಹುದ್ದೆ ಮಂಜೂರಾಗಿದ್ದು, ಈ ಪೈಕಿ 07 ಖಾಯಂ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ 04 ಸಿಬ್ಬಂದಿ ವರ್ಗದವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.<br><br>ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ:ಇಡಿ 117 ಯುಇಸಿ 2020 (ಇ), ದಿನಾಂಕ:10-08-2022 ರಲ್ಲಿ ಇಲಾಖೆಯ ಕಛೇರಿಗಳು ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅವಶ್ಯವಿರುವ ಗ್ರೂಪ್-ಡಿ ದರ್ಜೆಯ 700 ಕಛೇರಿ ಸಹಾಯಕರು ಮತ್ತು 300 ಶೈಕ್ಷಣಿಕ ಸಹಾಯಕರು (ಪ್ರಯೋಗಾಲಯಕ್ಕೆ) ಮತ್ತು ಸ್ವಚ್ಛತಾ ಕಾರ್ಯಕ್ಕೆ 152 ಒಟ್ಟು 1152 ಹುದ್ದೆಗಳಿಗೆ ಹೊರ/ಸೇವಾ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ಅದರಂತೆ, ಸದರಿ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಿಕೊಳ್ಳು ಆಡಳತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಅದರಂತೆ ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಿಕೊಳ್ಳಲು ಕ್ರಮವಹಿಸಲಾಗುತ್ತಿದೆ. |

ಇಡಿ 149 ಡಿಸಿಇ 2023

(ಡಾ: ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು